# ಸರಕಾರಿ ಉರ್ದು ಪ್ರೌಢ ಶಾಲೆ(RMSA) ಅಣ್ಣಿಗೇರಿ

**ಮಾದರಿ ಪ್ರಶ್ನೆಪತ್ರಿಕೆ–04**

**ತರಗತಿ : 10ನೇ** | **ವಿಷಯ : ದ್ವಿತೀಯ ಭಾಷೆ ಕನ್ನಡ**

**ಅಂಕಗಳು : 80** | **ಸಮಯ : 3 ಗಂಟೆ**

---

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿ. (1X4=4)**

1 ರಾಮನು ನಮ್ಮ ಮನೆಗೆ ಬರುವನು ಈ ವಾಕ್ಯದಲ್ಲಿರುವ ಸಜಾತಿ ಪದ:

ಎ)ಮನೆಗೆ ಬಿ)ಬರುವನು ಸಿ)ನಮ್ಮ ಡಿ)ರಾಮನು

2 ಬೇರೊಬ್ಬ ಪದವು ಈ ಸಂಧಿಗೆ ಉದಾಹರಣೆ:

ಎ) ಲೋಪಸಂಧಿ ಬಿ) ಯಣ್ ಸಂಧಿ ಸಿ) ಆದೇಶ ಸಂಧಿ ಡಿ) ಗುಣ ಸಂಧಿ

3 ಕೈಕೊಡು ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ:

ಎ)ದ್ವಿರುಕ್ತಿ ಬಿ)ಜೋಡುನುಡಿ ಸಿ)ನುಡಿಗಟ್ಟು ಡಿ)ಅನುಕರಣಾವ್ಯಯ

4 ಸವಿಚೈತ್ರ ಪದವು ಈ ಸಮಾಸಕ್ಕೆ ಉದಾಹರಣೆ:

ಎ)ಕ್ರಿಯಾ ಸಮಾಸ ಬಿ)ದ್ವಿಗು ಸಮಾಸ ಸಿ)ದ್ವಂದ್ವ ಸಮಾಸ ಡಿ)ಕರ್ಮಧಾರೆಯ ಸಮಾಸ

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ (1X12=12)**

5 ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?

6 ನಿಜವಾದ ಶಿಕ್ಷಕನಿಗೆ ಹೆಚ್ಚು ಯಾರು ಪ್ರೀಯರಾಗಿರುತ್ತಾರೆ?

7 ಅಮೇರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು?

8 ತಿಮಿರಕ್ಕೆ ವೈರಿ ಯಾವುದು?

9 ಗೋಪಾಲನು ಕಾಡಿನಲ್ಲಿ ಯಾವ ಹಣ್ಣುಗಳನ್ನು ಆಯ್ದು ತಿಂದನು?

10 ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ?

11 ಮೇಲೇರಿದವರು ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?

12 ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು?

13 ಲಂಡನ್‌ನಲ್ಲಿ ಕೆಲಸ ಮಾಡಲು ಹೊರಗಿನಿಂದ ದಿನಾಲು ಎಷ್ಟು ಜನ ಬರುತ್ತಾರೆ?

14 ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?

15 ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?

16 ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ?

SHARANU SH

**III ಈ ಕೆಳಗಿನ ಪ್ರಶ್ನೆಗಳಿಗೆ 3 ಅಥವಾ 4 ವಾಕ್ಯಗಳಲ್ಲಿ ಉತ್ತರಿಸಿ.** **(8X2=16)**

17 ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?

18 ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಣುತ್ತಿತ್ತು?

19 ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?

20 ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು?

21 ಕರ್ಪೂರದ ಕೆಲಸವೇನು?ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ?

22 ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ?

23 ವೈದ್ಯರು ತಮ್ಮ ಸೇವೆಯಿಂದ ಯಾವ ಪ್ರತಿಫಲಗಳು ಲಭಿಸಿದವು ಎಂದು ತನ್ನ ಹೆಂಡತಿಗೆ ಹೇಳಿದರು?

24 ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ?

**IV ಈ ಕೆಳಗಿನ ಸಾಹಿತಿಯ ಜನನ,ಸ್ಥಳ,ಕಾಲ,ಕೃತಿ,ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **(1X3=3)**

25 ಎಂ.ಗೋಪಾಲಕೃಷ್ಣ ಅಡಿಗ

**V ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ** **(1X3=3)**

26 ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನವಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ–ಅಕ್ಕಮಹಾದೇವಿ

**VI. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ** **(1X3=3)**

27 ಕಾಡು ತುಂಬ ಪ್ರೀತಿಯ ಹೊಳೆ ಕೋಡಿಯಂತೆ ಹರಿಯಿತು.

**VII ಗಾದೆಯನ್ನು ವಿಸ್ತರಿಸಿ ಬರೆಯಿರಿ.** **(1X3=3)**

28 ಕೈ ಕೆಸರಾದರೆ ಬಾಯಿ ಮೊಸರು

**ಅಥವಾ**

ಸತ್ಯಕ್ಕೆ ಸಾವಿಲ್ಲಾ ಸುಳ್ಳಿಗೆ ಸುಖವಿಲ್ಲಾ

**VIII ಈ ಕೆಳಗಿನ ವಾಕ್ಯಗಳಿಗೆ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ.** **(5X3=15)**

29 ಜಗತ್ತನ್ನು ನೋಡದ ನನಗೆ ಜಗತ್ತಿಗೆ ಏನು ಕೊಡಲು ಸಾಧ್ಯ

30 ದನಗಳನ್ನು ಕಾಯುತ್ತಾ ಇನ್ನೆಲ್ಲಿಗೆ ಹೋದನೋ ಏನೋ?

31 ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು

32 ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ

33 ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ

SHARANU SH

**IX ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **(1X4=4)**

34 ಕೊರಡ ಕೊನಸಿರಿ.........................................

..................................................................

..................................................................

ಕಲರವಕೆ ಮತ್ತೇರಿದೆ

**ಅಥವಾ**

ಯುಗದ ಹಿಂದಿನ ....................................

..................................................................

..................................................................

.....................................ತುಂಬ ಸವಿಚೈತ್ರವು

**X ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **(1x4=4)**

35 ಸಿದ್ದಾರ್ಥನು ಬುದ್ಧನಾದ ಪರಿ ಹೇಗೆ?

**ಅಥವಾ**

ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡಿತು?

**XI. ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**(2 X2=4)**

**36** ಜಗತ್ತಿನ ಮೋಹಕ ಉದ್ಯಾನಗಳಲ್ಲಿ ಒಂದಾದ ಬೆಂಗಳೂರಿನ ಲಾಲ್‌ಬಾಗ್‌ನ ಚೆಲುವನ್ನು ಹೀರಿ ಹೀರಿ ತಣಿಯದವರಾರು? ಆ ಹೆಸರನ್ನು ಕೇಳಿದೊಡನೆಯೆ ನಿಸರ್ಗ ಶಿವಾರಾಧಕರು ರಸಸಮಾಧಿಯಲ್ಲಿ ಮುಳುಗೇಳುತ್ತಾರೆ.ಪುಳಿಕಿತರಾಗುತ್ತಾರೆ.ಪ್ರತಿನಿತ್ಯವೂ ಸುರ್ಯೋದಯ,ಸೂರ್ಯಾಸ್ತದ ಸಮಯದಲ್ಲಿ ದೇವತೆಗಳು ಭೂಮಿಗಿಳಿದು ಬಂದು ಸೌಂದರ್ಯವಾರಾಶಿಯಲ್ಲಿ ಮಿಂದು ಪುನೀತರಾಗುತ್ತಾರೆ.

ರಾಜ್ಯದ ಅನೇಕ ಉದ್ಯಾನಗಳಿಗೆ ಜನ್ಮವಿತ್ತ ಲಾಲ್‌ಬಾಗ್ 'ಉದ್ಯಾನರಾಣಿ'ಎಂಬ ಬಿರುದಿಗೆ ಪಾತ್ರವಾಗಿದೆ.ಇಂತಹ ಉದ್ಯಾನ ರಾಜ್ಯಕ್ಕೆ ತಂದವರು ಯಾರು ಎಂದರೆ ಅವರೇ ಸಸ್ಯಜ್ಞಾನಿ,ನಿಸರ್ಗ ಪ್ರೇಮಿ ಸದಾ ರೈತ ಹಿತಾಕಾಂಕ್ಷಿ ಡಾ.ಎಂ.ಎಚ್.ಮರಿಗೌಡರು.ನೊಬೆಲ್ ವಿಜೇತ ಸಿ.ವಿ.ರಾಮನ್‌ರವರು ಲಾಲ್‌ಬಾಗ್‌ನ ಅತಿಶಯ ಸೌಂದರ್ಯಕ್ಕೆ ಮಾರುಹೋಗಿ ಅದಕ್ಕೆ ಕಾರಣವಾದ ಡಾ.ಎಂ.ಎಚ್.ಮರಿಗೌಡರಿಗೆ ನಾಗರಿಕರು ಕೃತಜ್ಞರಾಗಿರಬೇಕೆಂದು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.ರಾಷ್ಟ್ರದ ಬಂಜರು ಭೂಮಿಯ ಸಾಗುವಳಿ ಅತ್ಯಗತ್ಯವೆಂದು ಮೊಟ್ಟಮೊದಲಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟ ಕೀರ್ತಿಯು ಮರಿಗೌಡರಿಗೆ ಸಲ್ಲಬೇಕು.ಎಲ್ಲಕ್ಕಿಂತ ಮಿಗಿಲಾಗಿ ರೈತರ ಕ್ಷೇಮದ ಬಗೆಗಿನ ಅವರ ಕಳಕಳಿ ಅಸಾಧಾರಣವಾದದ್ದು.ಆರ್ಥಿಕ ಪ್ರಗತಿಗೆ,ವಾಣಿಜ್ಯಾಭಿವೃದ್ಧಿಗೆ ಅಂತರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ಹೊಸ ದಾಖಲೆಯನ್ನು ನಿರ್ಮಿಸಬೇಕೆಂದು ಮರಿಗೌಡರ ಹೇರಾಸೆ.ಈ ಕಾರಣಗಳಿಂದಾಗಿ ಡಾ.ಮರಿಗೌಡರು ಕರ್ನಾಟಕದ ಹಾಗೂ ಭರತಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ.

ಗಿಡಗಳ ಸಮೃದ್ಧವಾದ ಬೆಳವಣಿಗೆಗೆ ನೀರು,ಗೊಬ್ಬರ ಮಾತ್ರ ಸಾಲದು.ಮಾನವನ ಪ್ರೀತಿಯ ವರ್ಷವೂ ಬೇಕು.ಇಂತಹ ಪ್ರೀತಿಯನ್ನು ವರ್ಷಿಸುವ ತನ್ನ ಆತ್ಮವನ್ನು ನಿವೇದಿಸಿಕೊಳ್ಳುವ ವೃಕ್ಷಪ್ರೇಮಿಯ ಆಗಮನದಿಂದ ಇಡೀ ಲಾಲ್‌ಬಾಗೇ ಚೇತರಿಸಿಕೊಂಡಿದೆ.ಕನ್ನಡನಾಡಿನ ಮಣ್ಣು ಪುಳಕಗೊಂಡಿದೆ.

**ಪ್ರಶ್ನೆಗಳು**

ಅ) ಲಾಲ್‌ಬಾಗ್ ಕಂಡಾಗ ನಿಸರ್ಗ ಶಿವಾರಾಧಕರಿಗೆ ಆಗುವ ಅನುಭವಗಳೇನು?

ಆ) ಮರಿಗೌಡರು ಭರತಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಹೇಗೆ ಅಜರಾಮರಾಗಿದ್ದಾರೆ?

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ವಿಷಯಕ್ಕೆ ಪ್ರಬಂಧವನ್ನು ಬರೆಯಿರಿ. (1X4=4)**

37 ಗ್ರಂಥಾಲಯಗಳ ಮಹತ್ವ

**ಅಥವಾ**

ರಾಷ್ಟ್ರೀಯ ಹಬ್ಬಗಳ ಮಹತ್ವ

**XIII ಈ ಕೆಳಗಿನ ಯವೂದಾದರೂ ಒಂದು ಪತ್ರವನ್ನು ಬರೆಯಿರಿ (1X5=5)**

38 ನಿಮ್ಮನ್ನು ಧಾರವಾಡದ ರಾಜೀವಗಾಂಧಿ ನಗರದಲ್ಲಿ ವಾಸಿಸುತ್ತಿರುವ ಕಲ್ಪನಾ/ರಾಹುಲ್ ಎಂದು ಭಾವಿಸಿಕೊಂಡು ಶಿವಮೊಗ್ಗದ ಸದಾಶಿವನಗರದಲ್ಲಿ ವಾಸಿಸುತ್ತಿರುವ ನಿಮ್ಮ ತಂದೆಗೆ ಶಾಲಾ ವಾಷಿಕೋತ್ಸವಕ್ಕೆ ಆಗಮಿಸುವಂತೆ ಪತ್ರ ಬರೆಯಿರಿ

**ಅಥವಾ**

ನಿಮ್ಮನ್ನು ಕೊಪ್ಪಳದ ಗಾಂಧಿನಗರದ ಅಬ್ದುಲ್/ಸಾನಿಯಾ ಎಂದು ಭಾವಿಸಿಕೊಂಡು ನಿಮ್ಮ ಓಣಿಯಲ್ಲಿ ಗ್ರಂಥಾಲಯ ಸ್ಥಾಪಿಸುವಂತೆ ಜಿಲ್ಲಾಧಿಕಾರಿಗೊಂದು ಮನವಿ ಪತ್ರ ಬರೆಯಿರಿ

***********

SHARANU SH